ದಿನಾಂಕಃ 03-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ 2, 8, 9 ರಿಂದ 14 ರವರ ಪರ ವಕೀಲರಿಂದ,

1) ದಾವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಸುಮಾರು ರೂ. 50 ಲಕ್ಷ ಆಗುತ್ತದೆ. ದೂಲಿ ಸತ್ಯನಾರಾಯಣ ರವರು ಪ್ರತಿವಾದಿಗಳಿಗೆ ಮಾರಾಟ ಮಾಡಿದಾಗ ತಕರಾರು ಮಾಡಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ದೂಲಿ ಸತ್ಯನಾರಾಯಣ ರವರಿಗೆ 2 ಎಕರೆ 4 ಗುಂಟೆ ಆಸ್ತಿಯನ್ನು ಮಾರಾಟ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ದೂಲಿ ಸತ್ಯನಾರಾಯಣ ರವರಿಗೆ 3 ಎಕರೆ 6 ಗುಂಟೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.

2) ಸರ್ವೆ ನಂ. 46/1 ರಲ್ಲಿ 3 ಎಕರೆ 3 ಗುಂಟೆ ಮತ್ತು ಸರ್ವೆ ನಂ. 46/2 2 ಎಕರೆ 10 ಗುಂಟೆ ಪೋಡಾಗಿರುತ್ತದೆ ಎಂದರೆ ಸರಿ. ಬಾಬಾ ಸಾಹೇಬ್ ರವರು ತೀರಿಕೊಂಡ ನಂತರ ಅವರ ಮಕ್ಕಳು ಸರ್ವೆ ನಂ. 46/1 ರಲ್ಲಿ 26 ಗುಂಟೆ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ದೂಲಿ ಸತ್ಯನಾರಾಯಣ ರವರು ಬಾಬಾ ಸಾಹೇಬ್ ರವರ ಮಕ್ಕಳ ವಿರುದ್ಧ ಅಸಲು ದಾವೆ ಸಂಖ್ಯೆ 94/1989 ರಂತೆ ಸ್ವಾಧೀನ ಕೋಡಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಪಕ್ಷಗಾರರು ರಾಜಿ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿಗಳು ರಾಜಿ ಅರ್ಜಿಯಂತೆ ರೂ. 75,000/- ಹಣ ಮರುಪಾವತಿ ಮಾಡದ ಕಾರಣ ದೂಲಿ ಸತ್ಯನಾರಾಯಣ ರವರ ಪತ್ನಿ ಅಮಲ್ಜಾರಿ ಸಂಖ್ಯೆ 112/2005 ಅರ್ಜಿ ಸಲ್ಲಿಸಿ ಸ್ವಾಧೀನ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

3) ತದನಂತರ, ದೂಲಿ ಸತ್ಯನಾರಾಯಣ ರವರ ಪತ್ನಿ 26 ಗುಂಟೆ ಆಸ್ತಿಯನ್ನು ದಿನಾಂಕ 16.11.2016 ರಂದು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ

ಎಂದರೆ ಸಾಕ್ಷಿಯು ಮಾರಾಟ ಮಾಡಿದ ನಂತರ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ದಿನಾಂಕ 02.03.2017 ರಂದು 6 ನೇ ಪ್ರತಿವಾದಿ ಸದರಿ 26 ಗುಂಟೆ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಿನಾಂಕ 09.12.2013 ರಂದು ದೇವಿಲಾಲ್ ಚಾವತ್ ರವರು ಬೋಜರಾಜ್ ಚಾವತ್ ರವರಿಗೆ ಆಸ್ತಿಯನ್ನು ದಾನ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರ್ವೇ ನಂ. 46/2 ರಲ್ಲಿ ಇರುವ ಆಸ್ತಿಯನ್ನು ದಾನ ಮಾಡಿದರೆ ನನ್ನ ಅಭ್ಯಂತರ ಇಲ್ಲ ಎಂದು ನುಡಿಯುತ್ತಾರೆ. ದೂಲಿ ಸತ್ಯನಾರಾಯಣ ರವರು ಸರ್ವೇ ನಂ. 46/1 ರಲ್ಲಿ ಇರುವ 3 ಎಕರೆ 6 ಗುಂಟೆ ಆಸ್ತಿಯನ್ನು ಖರೀದಿ ಮಾಡಿದ ನಂತರ ಭೂ ಪರಿವರ್ತನೆ ಮಾಡಿ ಹಂತ ಹಂತವಾಗಿ ಇತರೇಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

4) ದೂಲಿ ಸತ್ಯನಾರಾಯಣ ರವರ ಹೆಸರಿನಲ್ಲಿರುವ ಕ್ರಯ ಪತ್ರಕ್ಕೆ ನಾನು ಸಾಕ್ಷ್ಯದಾರನಾಗಿರುತ್ತೇನೆ. ಸದರಿ ಕ್ರಯ ಪತ್ರದಲ್ಲಿ ಸರ್ವೇ ನಂ.46/1 ಎಂದು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ. 46/1 ಆಸ್ತಿಯನ್ನು ನಾವು ದೂಲಿ ಸತ್ಯನಾರಾಯಣ ರವರಿಗೆ ಮಾರಾಟ ಮಾಡಿರುವುದಿಲ್ಲ ಮತ್ತು ಸ್ವಾಧೀನ ನೀಡಿರುವುದಿಲ್ಲ. ಸರ್ವೆ ನಂ. 46/1 ರಲ್ಲಿ ನಾವು ಮತ್ತು ಪ್ರತಿವಾದಿಗಳು ಸ್ವಾಧೀನ ಇರುತ್ತೇವೆ. ಪ್ರತಿವಾದಿಗಳು ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5) ಸರ್ವೇ ನಂ. 46/1 ರಲ್ಲಿ ಆಸ್ತಿಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಖಾತೆ ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಈ ದಾವೆಯನ್ನು ಸಲ್ಲಿಸಿದ ನಂತರ ಉಪ-ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. 1976 ರಿಂದ 2019 ರವರೆಗೆ ನಾವುಗಳು ಯಾವುದೇ ದಾವೆಯನ್ನು

ಸಲ್ಲಿಸಿರುವುದಿಲ್ಲ. ದಾವಾ ಸ್ವತ್ತುಗಳಲ್ಲಿ ಪ್ರತಿವಾದಿಗಳು ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ 3 ಮತ್ತು 4 ರವರ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ